ಶ್ರೀ ಎಚ್. ಎಸ್. ಸಿದ್ದಪ್ಪ.—ಈ ಕಟ್ಟಡ ಡಿಲಾಪಿಡೇಟೆಡ್ ಕಂಡೀಷನ್ಸ್‌ನಲ್ಲಿರುವುದರಿಂದ ಅಲ್ಲಿನ ಶಾಲಾ ಮಕ್ಕಳಿಗೆ ಅನಾಹುತವಾಗುವುದನ್ನು ತಪ್ಪಿಸುವ ಉದ್ದೇಶದಿಂದ ಷೆಡ್‌ಗಳನ್ನು ಹಾಕಿಸುತ್ತೇವೆಂದು ನೀವು ಚೇರ್‌ಮನ್‌ರಿಗೆ ಹೇಳಿದ್ದಿರಿ. ಅದೇ ರೀತಿಯಲ್ಲಿ ತಮ್ಮ ಕ್ಷೇತ್ರದಲ್ಲಿ ಷೆಡ್‌ಗಳನ್ನು ಹಾಕಿಸಿದ್ದೇನೆಂದು ಸಹ ಹೇಳಿದ್ದಿರಿ. ಆದ್ದರಿಂದ ಇಲ್ಲಿಯೂ ಷೆಡ್‌ಗಳನ್ನು ಹಾಕಿಸಿಕೊಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ಅಲ್ಲಿಗೆ ಷೆಡ್ ಹಾಕಿಸುವ ಪರಿಸ್ಥಿತಿ ಏನೂ ಇಲ್ಲ. ಅದನ್ನು ರಿಪೇರಿ ಮಾಡುವ ಪರಿಸ್ಥಿತಿ ಮಾತ್ರ ಇದೆ. ಅಷ್ಟು ಅದು ಡಿಲಾಪಿಡೇಟೆಡ್ ಕಂಡೀಷನ್ನಲ್ಲಿಲ್ಲ.

Sri N. G. HALAPPA.—In view of heavy rainfall there could you not expedite the matter inspite of economy orders ?

Sri A. R. BADRINARAYAN.—I am second to none to see that the matter is expedited. But the facts are there. We have to face the facts.

CONSTRUCTION OF KALIWALA TANK IN SAVANNUR TALUK

290. Sri V. V. WAI (Shirahatti).— Will the Minister for Public Works and Electricity be pleased to state:—

(a) the reason for not completing the construction work of Kaliwala Tank in Savannur Taluk though the work was started;

(b) when the construction work of the said tank will be completed ?

Sri H. M. CHANNABASAPPA (Minister for Public Works and Electricity).—

(a) The construction of the Tank is not yet started.

(b) The question does not arise in view of the reply to clause (a).

ಶ್ರೀ ವಿ ವಿ. ವಾಯಿ.—ಈ ಕೆರೆಯ ನಿರ್ಮಾಣದ ಕೆಲಸ ಇನ್ನೂ ಪ್ರಾರಂಭವಾಗಿಲ್ಲವೆಂದು ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಕೊಟ್ಟಿದೆ. ಈ ಕೆರೆಯ ಅವಶ್ಯಕತೆ ಆ ಗ್ರಾಮದ ಜನರಿಗೆ ಬಹಳ ಅವಶ್ಯವಾಗಿರುವುದರಿಂದ, ಇದನ್ನು ತೀವ್ರವಾಗಿ ಷುರು ಮಾಡಿಸುತ್ತೀರಾ.

† ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಉತ್ತರದಲ್ಲಿ ಹೇಳಿರುವ ಪ್ರಕಾರ, ಅದಕ್ಕೆ ತಕ್ಕ ಜವಿೂನು ಇನ್ನೂ ಒದಗದೇ ಇರುವ ಪ್ರಯುಕ್ತ, ಈ ಕೆರೆಯ ಕೆಲಸವನ್ನು ಪ್ರಾರಂಭ ಮಾಡುವುದು ಕಷ್ಟವಾಗಿದೆ.

ಶ್ರೀ ವಿ.ವಿ. ವಾಯಿ.—ಹಾಗಾದರೆ ಜವಿೂನನ್ನು ಸರ್ಕಾರಕ್ಕೆ ಒದಗಿಸಿಕೊಟ್ಟರೆ ಅದನ್ನು ತೀವ್ರವಾಗಿ ಪ್ರಾರಂಭಮಾಡುತ್ತೀರಾ?

ಶ್ರೀ ಎಚ್ ಎಂ. ಚನ್ನಬಸಪ್ಪ.—ಅದು ಬಮ್ಮ ಸುಫರ್ದು ಬಂದಮೇಲೆ ಇದಕ್ಕೆ ಏರ್ಪಾಡು ಮಾಡುತ್ತೇವೆ.

REPORT ON CONDITIONS OF WEAVERS OF BIJAPUR DISTRICT

313. Sri P. M. BANGI (Jamkhandi).—

Will the Minister for Industries be pleased to state:—

(a) whether it is a fact that Sri Rathod, Minister of State for Fisheries visited Weavers' Centres at (1) Chadachan (2) Banhatti (3) Jamkhandi (4) Ramapur (5) Rabakavi (6) Terdal (7) Hunagund (8) Irakali (9) Guledgud and (10) Sulebhavi in Bijapur to study the hardship and needs of suffering weavers in the drought affected areas of Bijapur District with concerned M. L. As. and the Joint Director of Industries at the instance of the Chief Minister on 4th, 5th and 6th April 1973.

(b) whether he has submitted the report this week proposing immediate reliefs to suffering weavers by supplying sufficient yarn and interest free loans to poor weavers;

(c) whether the report will be placed before this House?

Sri S. M. KRISHNA (Minister for Industries).—

(a) Yes.

(b) Yes.

(c) No-as the Report is of administrative nature.

ಶ್ರೀ ಪಿ ಎಂ ಬಾಂಗಿ.— (ಆ) ಪ್ರಶ್ನೆಗೆ ಉತ್ತರವಾಗಿ 'ಹೌದು' ಎಂಬುದಾಗಿ ಹೇಳಿದೆ. ಅಲ್ಲಿ ಎಷ್ಟೇ ಕಷ್ಟಪಟ್ಟರೂ ಅಲ್ಲಿನ ನೇಕಾರರಿಗೆ ಸಾಕಷ್ಟು ನೂಲು ಕೊಟ್ಟಿಲ್ಲ. ಮಾನ್ಯ ಶ್ರೀ ಕೆ. ಟಿ. ರಾಠೋಡ್ ಮಂತ್ರಿಗಳು ಇದರ ಬಗ್ಗೆ ಶಿಫಾರಸ್ಸನ್ನು